

ಶಶಿಧರ್ ಹಳೇಮನಿ

# ಸ್ತ್ರೀ ಏನು ಬಯಸುತ್ತಾಳೆ?

■ ರಮಣ್ ಶೆಟ್ಟಿ ರೆಂಜಾಳ್,
ಮುಂಬೈ

ಓರ್ವ ವಿದ್ವಾನರಿಗೆ ರಾಜಾಜ್ಞೆಯನುಸಾರ ಗಲ್ಲು ಶಿಕ್ಷೆ ವಿಧಿಸಲಾಗಿತ್ತು. ಆದರೆ ರಾಜ, 'ನನ್ನದೊಂದು ಸವಾಲಿಗೆ ಸರಿಯಾದ ಉತ್ತರ ನೀಡಿದರೆ ನಿನ್ನ ಶಿಕ್ಷೆಯನ್ನು ವಜಾ ಮಾಡಲಾಗುವುದು' ಎಂಬುದಾಗಿ ಬದುಕುಳಿಯುವ ಅವಕಾಶವೊಂದನ್ನು ನೀಡಿದ.

'ಸ್ತ್ರೀ ಏನು ಬಯಸುತ್ತಾಳೆ?' ಎಂಬುವುದು ರಾಜನ ಆ ಅಮೂಲ್ಯ ಪ್ರಶ್ನೆಯಾಗಿತ್ತು!

ವಿದ್ವಾನ್ ಹೇಳಿದರು, 'ಸಾಕಷ್ಟು ಸಮಯ ಸಿಕ್ಕರೆ ಅದನ್ನು ಪತ್ತೆ ಹಚ್ಚಿ ನಿಮಗೆ ತಿಳಿಸಬಲ್ಲೆ' ಎಂದರು. ಮಹಾರಾಜ ಒಂದು ವರ್ಷದ ಸಮಯ ನೀಡಿದ.

ವಿದ್ವಾನರು ತುಂಬಾ ತಿರುಗಾಡಿದರು. ತುಂಬಾ ಜನರಲ್ಲಿ ವಿಚಾರಿಸಿದರು. ಆದರೆ ಎಲ್ಲೂ ಸಮಂಜಸವೆನಿಸುವ ಉತ್ತರ ದೊರೆಯಲಿಲ್ಲ. ಕೊನೆಗೊಬ್ಬರು ತಿಳಿಸಿದರು, 'ದೂರದ ಬೆಟ್ಟದಲ್ಲಿ ಒಬ್ಬಾಕೆ ಭೂತನಿ (ಹೆಣ್ಣು ಭೂತ) ಇರುವಳು. ಆಕೆ ನಿಮಗೆ ಸರಿಯಾದ ಉತ್ತರ ನೀಡಬಲ್ಲಳು'.

ವಿದ್ವಾನರು ಆಕೆಯ ಬಳಿ ತೆರಳಿ ಪ್ರಶ್ನೆ ಮುಂದಿಟ್ಟರು. ಆಕೆ ತನ್ನದೊಂದು ಷರತ್ತಿದೆ, ಅದನ್ನು ನೆರವೇರಿಸಿದರೆ ನೆರವಾಗುವೆನೆನ್ನುತ್ತಾ ತನ್ನನ್ನು ಮದುವೆಯಾಗ ಬೇಕೆನ್ನುವ ಷರತ್ತನ್ನಿಟ್ಟಳು!

ಉತ್ತರ ಸಿಗದೆ ರಾಜನ ಕೈಯಲ್ಲಿ ಹತನಾಗುವುದಕ್ಕಿಂತ ಮದುವೆಯಾಗುವುದೇ ಲೇಸೆಂದು ವಿದ್ವಾನರು ಒಪ್ಪಿಗೆ ವ್ಯಕ್ತಪಡಿಸಿದರು.

***

ಮದುವೆಯ ನಂತರ ಆಕೆ ಹೇಳಿದಳು, 'ನನ್ನಿಚ್ಛೆಯಂತೆ ನೀನು ನನ್ನನ್ನು ವರಿಸಿರುವುದರಿಂದ ನಾನು ಪ್ರಸನ್ನಳಾಗಿದ್ದೇನೆ. ಆದ್ದರಿಂದ ಇನ್ನು ಮುಂದೆ ದಿನದ 12 ಗಂಟೆಗಳ ಕಾಲ ನಾನು ಭೂತನಿಯಾಗಿಯೂ, ಮಿಕ್ಕುಳಿದ 12 ಗಂಟೆಗಳ ಕಾಲ ಗಂಧರ್ವ ಕನ್ಯೆಯಾಗಿಯೂ ನಿನ್ನೊಂದಿಗೆ ಬಾಳುವೆ ನಡೆಸುತ್ತೇನೆ. ಈಗ ನೀನು ಹೇಳು, ದಿನದಲ್ಲಿ ಭೂತನಿಯಾಗಿರಲೋ ಅಥವಾ ರಾತ್ರಿಯಲ್ಲೋ?' ಎಂದಳು.

ಈಕೆ ದಿನದಲ್ಲಿ ಭೂತನಿಯಾಗಿದ್ದರೆ ತನ್ನ ದಿನಪೂರ್ತಿ ವ್ಯರ್ಥವಾಗುತ್ತದೆ ಮತ್ತು ರಾತ್ರಿಯಲ್ಲಿ ಭೂತನಿಯಾಗಿದ್ದರೆ ರಾತ್ರಿ ಕಳೆಯುವುದು ಕಷ್ಟವಾಗುತ್ತದೆ ಎಂದು ಯೋಚಿಸಿದ ವಿದ್ವಾನ್ ಒಂದು ತೀರ್ಮಾನಕ್ಕೆ ಬಂದು ತಿಳಿಸಿದ, 'ನಿನಗೆ ಯಾವಾಗ ದೇವತೆಯಾಗುವ ಮನಸ್ಸಾಗುತ್ತದೋ ಆವಾಗ ದೇವ ಕನ್ಯೆಯಾಗು ಮತ್ತು ಯಾವಾಗ ಭೂತನಿಯಾಗಿರಲು ಮನಸ್ಸಾಗುತ್ತದೋ ಆಗ ಭೂತನಿಯಾಗು!' ಈ ಮಾತನ್ನಾಲಿಸಿ ಆಕೆ ಅತಿ ಪ್ರಸನ್ನಳಾದಳು ಮತ್ತು ತನ್ನನ್ನು ತನ್ನ ಮರ್ಜಿಯಂತೆ ಇರಲೊಪ್ಪಿದ್ದರಿಂದ ಆಕೆ ಸದಾ ಗಂಧರ್ವ ಸ್ತ್ರೀಯಾಗಿಯೇ ಉಳಿಯುವ ನಿರ್ಧಾರ ಗೈದಳು.

...ರಾಜನ ಪ್ರಶ್ನೆಯ ಉತ್ತರವೂ ಕೂಡಾ ಇದೇ ಆಗಿದೆ !

ಸ್ತ್ರೀ ಯಾವತ್ತಿದ್ದರೂ ತನ್ನಿಚ್ಛೆಯಂತೆ ಇರಲು ಇಷ್ಟಪಡುತ್ತಾಳೆ. ಅವಳಿಗೆ ಅವಳ ಮರ್ಜಿಯಂತೆ ಬದುಕಿರಲು ಅವಕಾಶವಿತ್ತರೆ ಆಕೆ ದೇವತೆಯಾಗಿರುತ್ತಾಳೆ, ಇಲ್ಲದಿದ್ದರೆ ಭೂತನಿಯಾಗುತ್ತಾಳೆ!

ಆದ್ದರಿಂದ ಸ್ತ್ರೀಯರನ್ನು ಅವರಿಚ್ಛೆಯಂತೆ ಬಿಟ್ಟು ಗೌರವದಿಂದ ನಡೆಸಿಕೊಳ್ಳಬೇಕು.

■